ಪತ್ತೆ ಹಚ್ಚುವುದು ಹಾಗೂ ಮಂಜೂರಾತಿ ಷರತ್ತುಗಳ ಉಲ್ಲಂಘನೆಯನ್ನು ಗುರುತಿಸುವುದನ್ನೊಳಗೊಂಡಂತೆ ಸಮಗ್ರ ತನಿಖೆಯನ್ನು ನಡೆಸತಕ್ಕದ್ದು. ಅಲ್ಲದೆ, ನ್ಯಾಯಾಲಯದ ನಡವಳಿಗಳು ಹಾಗೂ ಬಾಕಿ ಇರುವ ಪ್ರಕರಣಗಳನ್ನು ಪರಿಶೀಲಿಸಿ, ಕಾನೂನಾತ್ಮಕ ವಿಶ್ಲೇಷಣೆ, ದಾಖಲೆಗಳ ಶೋಧನೆ ಮತ್ತು ಮೌಲ್ಯಮಾಪನ ಕೈಗೊಳ್ಳುವುದು, ಉಪಗ್ರಹ ದತ್ತಾಂಶಗಳನ್ನು ಪರಿಶೀಲಿಸುವ ಮೂಲಕ ಪರಿಸರಕ್ಕಾದ ಹಾನಿಯನ್ನು ಅಂದಾಜಿಸುವುದು ಹಾಗೂ ಸ್ಥಳೀಯ ಸಾರ್ವಜನಿಕರ ಪ್ರತಿಕ್ರಿಯೆಗಳನ್ನು ಪಡೆಯತಕ್ಕದ್ದು. ಇದರ ಜೊತೆಗೆ, ಹಲವು ವರ್ಷಗಳಿಂದ ಅಸ್ತಿತ್ವದಲ್ಲಿರುವ ಸಾರ್ವಜನಿಕ ಸಾಮಾನ್ಯ ಜಮೀನುಗಳು, ಸಾರ್ವಜನಿಕ ರಸ್ತೆಗಳು, ಜಲಮೂಲಗಳು, ಗುಡ್ಡಗಳು, 'ಬಂಡೆ ಖರಾಬು' ಹಾಗೂ ಇತರೆ ಸಾರ್ವಜನಿಕ ಸೌಲಭ್ಯಗಳ ಸಮೀಕ್ಷೆ ನಡೆಸಿ ಅವುಗಳ ಗಡಿಗಳನ್ನು ಗುರುತಿಸತಕ್ಕದ್ದು. ತನಿಖೆಯಲ್ಲಿ ಕಂಡುಬಂದ ಯಾವುದೇ ಅಂಶಗಳಿಗೆ ಉತ್ತರಿಸಲು ಸದರಿ ಎನ್‌ಜಿಒ ಮತ್ತು ಇತರೆ ಪ್ರತಿವಾದಿಗಳಿಗೆ ಸಮನ್ಸ್ ಜಾರಿ ಮಾಡಿ ಸೂಕ್ತ ಅವಕಾಶವನ್ನು ಒದಗಿಸುವುದು ಹಾಗೂ ಆಪಾದಿತ ಒತ್ತುವರಿ ಯಾವುದಾದರೂ ಇದ್ದಲ್ಲಿ ಅದರ ಸತ್ಯಾಸತ್ಯತೆಯನ್ನು ನಿರ್ಧರಿಸತಕ್ಕದ್ದು. ಇದರೊಂದಿಗೆ, ಯಾವುದೇ ನೈಜ ಮಂಜೂರಾತಿಗಳು ಹಾಗೂ ಖಾಸಗಿ ಮಾಲೀಕತ್ವದ ಗಡಿಗಳನ್ನು ನಿರ್ದಿಷ್ಟ ಕಾಲಮಿತಿಯೊಳಗೆ ಗುರುತಿಸಲು ಕ್ರಮ ಕೈಗೊಂಡು, ಅಂತಿಮವಾಗಿ ತನ್ನ ತನಿಖಾ ವರದಿಯನ್ನು ಗರಿಷ್ಠ ಮೂರು ತಿಂಗಳ ಕಾಲಮಿತಿಯೊಳಗೆ ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

**(ಮಹಾಂತಯ್ಯ ಎಸ್. ಹೊಸಮಠ)**
ಸರ್ಕಾರದ ಅಧೀನ ಕಾರ್ಯದರ್ಶಿ,
ಕಂದಾಯ ಇಲಾಖೆ (ಭೂ ಮಂಜೂರಾತಿ-1).

**PR-331**

## <u>ಕರ್ನಾಟಕ ಸರ್ಕಾರದ ನಡವಳಿಗಳು</u>

**ವಿಷಯ:** ರಾಜ್ಯದ ಉತ್ತರ ಭಾಗದ ಸಕ್ಕರೆ ಕಾರ್ಖಾನೆಗಳಲ್ಲಿ 2026-27ನೇ ಸಾಲಿನ ಕಬ್ಬು ಅರೆಯುವ ಹಂಗಾಮನ್ನು ಪ್ರಾರಂಭಿಸಲು ದಿನಾಂಕವನ್ನು ನಿಗದಿಪಡಿಸುವ ಬಗ್ಗೆ

**ಓದಲಾಗಿದೆ:**
1. ಸರ್ಕಾರದ ಆದೇಶ ಸಂಖ್ಯೆ: ಸಿಐ 236 ಎಸ್‌ಜಿಎಫ್ 2026, ದಿನಾಂಕ:06.07.2026
2. ಮಾನ್ಯ ಭಾರತ ಸರ್ಕಾರದ ಗ್ರಾಹಕರ ವ್ಯವಹಾರಗಳು, ಆಹಾರ ಮತ್ತು ಸಾರ್ವಜನಿಕ ವಿತರಣೆ ಹಾಗೂ ನವೀನ ಮತ್ತು ನವೀಕರಿಸಬಹುದಾದ ಇಂಧನ ಸಚಿವರ ಪತ್ರ ಸಂಖ್ಯೆ: D.O. No. 3-5/2022-Stat3-5/2022-Stat/381142/717, Dated:20.08.2026
3. ಭಾರತ ಸರ್ಕಾರದ ಜಂಟಿ ಕಾರ್ಯದರ್ಶಿಗಳ (ಸಕ್ಕರೆ) ಇವರ ಅಧ್ಯಕ್ಷತೆಯಲ್ಲಿ ದಿನಾಂಕ:04.08.2026 ರಂದು ರಾಜ್ಯಗಳ ಕಬ್ಬು ಆಯುಕ್ತರು/ ಸಕ್ಕರೆ ಆಯುಕ್ತರು/ ಸಕ್ಕರೆ ನಿರ್ದೇಶಕರು / ಪ್ರತಿನಿಧಿಗಳೊಂದಿಗೆ ನಡೆದ ಸಭಾ ನಡವಳಿ
4. ಭಾರತ ಸರ್ಕಾರದ ಆಹಾರ ಮತ್ತು ಸಾರ್ವಜನಿಕ ವಿತರಣಾ ಇಲಾಖೆಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಸಂಬಂಧಪಟ್ಟ ಅಪರ ಮುಖ್ಯ ಕಾರ್ಯದರ್ಶಿ/ಪ್ರಧಾನ ಕಾರ್ಯದರ್ಶಿ ಮತ್ತು ಕಬ್ಬು ಆಯುಕ್ತರು/ಸಕ್ಕರೆ ಆಯುಕ್ತರು/ಸಕ್ಕರೆ ನಿರ್ದೇಶಕರು/ರಾಜ್ಯಗಳ ಪ್ರತಿನಿಧಿಗಳೊಂದಿಗೆ ದಿನಾಂಕ:21.08.2026 ರಂದು ನಡೆದ ಸಭಾ ನಡವಳಿ.